26

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹುಣಸೂರು.**

**ಸಿ.ಸಿ.ಸಂಖ್ಯೆ 3643/2022**

ಫಿರ್ಯಾದುದಾರರುಃ ಶ್ರೀ. ಶೀನಶೆಟ್ಟಿ,
ಬಿನ್ ಲೇಟ್ ವೆಂಕಟಪ್ಪಶೆಟ್ಟಿ
ಸುಮಾರು 68 ವರ್ಷ,
ವಾಸಃ ಮನೆ ಸಂಖ್ಯೆ 57,
ಶೇಷಾದ್ರಿ ನಿಲಯ, ಹೆಚ್ ಡಿ ಕೋಟೆ, ರೋಡ್,
ಸಿ ಟಿ ಆರ್ ಐ ಎದುರು ಜ್ಯೋತಿನಗರ,
ಹುಣಸೂರು ನಗರ, ಮೈಸೂರು ಜಿಲ್ಲೆ.

ವಿರುದ್ಧ

ಆರೋಪಿಃ ಶ್ರೀ. ವೆಂಕಟಪತಿ
ಬಿನ್ ಲೇಟ್ ಪಿ ವೆಂಕಟಯ್ಯ,
(ಪ್ರಥಮ ದರ್ಜೆ ಗುತ್ತಿಗೆದಾರರು)
ಸುಮಾರು 58 ವರ್ಷ,
ವಾಸಃ ವಿನೋಭಾ ಕಾಲೋನಿ ರತ್ನಪುರಿ ರೋಡ್,
ಹುಣಸೂರು ತಾಲ್ಲೂಕು,
ಮೈಸೂರು ಜಿಲ್ಲೆ.

**<u>ದಂಡ ಪ್ರಕ್ರಿಯೆ ಸಂಹಿತೆ ಕಲಂ 313 ರ ಅಡಿ ಆರೋಪಿಯ ಹೇಳಿಕೆ</u>**

1. ಈ ಕೇಸಿನಲ್ಲಿ ನ್ಯಾಯಾಲಯದ ಮುಂದೆ ವಿಚಾರಣೆ ಮಾಡಿದ ಸಾಕ್ಷಿಯ ಹೇಳಿಕೆಯನ್ನು ಕೇಳಿದ್ದೀರಾ?

ಉತ್ತರಃ ಕೇಳಿದ್ದೇನೆ.

2. ಫಿರ್ಯಾದಿ ಸಾಕ್ಷಿ1 - ಶೀನಶೆಟ್ಟಿ ರವರು ತಮ್ಮ ಪ್ರಮಾಣಪತ್ರ / ಸಾಕ್ಷ್ಯದಲ್ಲಿ, ಆರೋಪಿಯಾದ ನೀವು, ಫಿರ್ಯಾದುದಾರರಿಂದ, ನಿಮ್ಮ ಕಾನೂನುಬದ್ಧ ಅವಶ್ಯಕತೆಗಾಗಿ ಅಂದರೆ ಹಿಂದೆ ಮಾಡಿದ ಸಾಲವನ್ನು ತೀರಿಸಲು ಹಾಗೂ ವ್ಯವಹಾರದ ಅಭಿವೃದ್ಧಿಗೆ ಮತ್ತು ಗೃಹಕೃತ್ಯದ ಖರ್ಚಿಗಾಗಿ ದಿಃ 13.06.2022 ರಂದು ಹಣವನ್ನು ಸಾಲವಾಗಿ ಪಡೆದು, ಸದರಿ ಸಾಲದ ಹಣವನ್ನು 3 ತಿಂಗಳೊಳಗೆ ಪಾವತಿಸುವುದಾಗಿ ತಿಳಿಸಿ, ಮೈಸೂರು ಶಾಖೆಯ ಕರ್ನಾಟದ ಕಂಟ್ರ್ಯಾಕ್ಟರ್ ಸಹಕಾರ ಬ್ಯಾಂಕ್ ನಿಯಮಿತ, ಬ್ಯಾಂಕ್ ನ ಚೆಕ್ ಸಂಖ್ಯೆ 0484546, ರೂ.3,00,000/- ಗಳ ಚೆಕ್ಕನ್ನು ನೀಡಿದ್ದು, ಸದರಿ ಚೆಕ್ಕನ್ನು ಫಿರ್ಯಾದುದಾರರು ಹುಣಸೂರು ಶಾಖೆಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕ್ ಗೆ ಹಾಜರುಪಡಿಸಿದಾಗ, ನಿಮ್ಮ ಖಾತೆಯಲ್ಲಿ "Refer to Drawer" ಎಂಬ ಹಿಂಬರಹದೊಂದಿಗೆ ಮಾನ್ಯವಾಗದೆ ವಾಪಸ್ಸಾಗಿರುತ್ತದೆ ಎಂದು ಫಿರ್ಯಾದಿ ಸಾಕ್ಷಿ-1 ರವರು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?

ಉತ್ತರಃ 

3. ಫಿರ್ಯಾದಿ ಸಾಕ್ಷಿ1 ರವರು ತಮ್ಮ ಪ್ರಮಾಣಪತ್ರ / ಸಾಕ್ಷ್ಯದಲ್ಲಿ, ಸದರಿ ವಿಷಯದ ಬಗ್ಗೆ ಅವರು ನಿಮಗೆ ನೋಂದಾಯಿತ ಅಂಚೆಯ ಮೂಲಕ ದಿನಾಂಕ 08.10.2022 ರಂದು ನೋಟೀಸನ್ನು ಕಳುಹಿಸಿದ್ದು, ಈ ವಿಳಾಸದಾರರು 7 ದಿವಸಗಳ ಬಟ್ಟವಾಡೆಯ ಸಮಯದಲ್ಲಿ ಸಿಗದ ಕಾರಣ ಇಂಟಿಮೇಷನ್ ಡೆಲಿವರಡ್ ಎಂಬ ಷರದೊಂದಿಗೆ ದಿಃ 19.10.2022 ರಂದು ವಾಪಸ್ಸು ಬಂದಿದ್ದು, ಸದರಿ ನೋಟೀಸು ನಿಮಗೆ ದಿನಾಂಕ 19.10.2022 ರಂದು ಜಾರಿಯಾಗಿದ್ದರೂ, ನೋಟೀಸಿಗೆ ಉತ್ತರವನ್ನು ನೀಡಿರುವುದಿಲ್ಲ ಮತ್ತು ಹಣವನ್ನು ಹಿಂದಿರುಗಿಸಿರುವುದಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?

ಉತ್ತರಃ 

27

4. ಫ್ರಾಸಾ1 ರವರು ತಮ್ಮ ಪ್ರಮಾಣಪತ್ರ / ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲದೇ ಇದ್ದರೂ ಸಹ ಅವರಿಗೆ ಮೋಸ ಮಾಡುವ ಉದ್ದೇಶದಿಂದ, ಚೆಕ್ಕನ್ನು ನೀಡಿರುತ್ತೀರಿ ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?

ಉತ್ತರ – ಸುಳ್ಳು

5. ನಿಮ್ಮ ಪರ ಸಾಕ್ಷಿಗಳಿವೆಯೇ?

ಉತ್ತರಃ ಇಲ್ಲ

6. ನೀವು ಹೆಚ್ಚಿಗೆ ಹೇಳುವುದು ಏನಾದರೂ ಇದೆಯೇ?

ಉತ್ತರಃ ನಾನು Class I Contractor ಅಲ್ಲ, ಅವರು ಸುಳ್ಳು ಕೇಸ್ ಹಾಕಿದ್ದಾರೆ.

ಮೇಲ್ಕಂಡ ಆರೋಪಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿದ್ದು, ಆರೋಪಿಯು ನೀಡಿದ ಉತ್ತರವನ್ನು ಹಾಗೆಯೇ ದಾಖಲಿಸಿಕೊಳ್ಳಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

15/6/24

(ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಹುಣಸೂರು.

ದಿನಾಂಕಃ 15.06.2024.